ಓ.ಎಸ್. ನಂಬರಃ 44/2025

ಪಿ. ಡಬ್ಲ್ಯೂಃ 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 06-02-2026)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

3. ವಾದ ಪತ್ರದಲ್ಲಿ ದಾವಾ ಪರಿಶಿಷ್ಟದಲ್ಲಿ ಹೇಳಿದ ಆಸ್ತಿಯ ವಿವರಗಳನ್ನು ನಾನೇ ನೀಡಿರುತ್ತೇನೆ. ಸದ್ರಿ ಆಸ್ತಿಯ ವಿವರಗಳನ್ನು ಇ-ಸ್ವತ್ತಿನ ಆಧಾರದಲ್ಲಿ ಬರೆಸಿರುತ್ತೇನೆ. ಸಾಕ್ಷಿಗೆ ನಿಪಿ-5 ರಲ್ಲಿ ನಾನು ದಾವಾ ಪರಿಶಿಷ್ಟದಲ್ಲಿ ಕಾಣಿಸಿದ ಆಸ್ತಿಯ ವಿವರಗಳು ಕಂಡುಬರುತ್ತದಾ ಎಂದರೆ, ಸಾಕ್ಷಿಯು ಕೇವಲ ಆಸ್ತಿಯ ಸರ್ವೆ ನಂ. ಮತ್ತು ವಿಸ್ತೀರ್ಣ ಮಾತ್ರ ಕಂಡುಬರುತ್ತದೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ನಿಪಿ-5 ರಲ್ಲಿ ಸರ್ವೆ ನಂ. 6ಅ1ಪಿ5 ರಲ್ಲಿ 00-05-12 ಕ್ಷೇತ್ರ ಎಂದು ಕಂಡುಬರುವುದಿಲ್ಲ. ಅದೇ ರೀತಿ ಸದ್ರಿ ಆಸ್ತಿಯ ತಿರ್ವೆ ಎಷ್ಟು ಎಂದು ನಿಪಿ-5 ರಲ್ಲಿ ಕಂಡುಬರುವುದಿಲ್ಲ ಎಂದರೆ ಹೌದು. ದಾವಾ ಪರಿಶಿಷ್ಟದಲ್ಲಿ ಆಸ್ತಿಯ ಕ್ಷೇತ್ರ ಮತ್ತು ತಿರ್ವೆಯ ವಿವರವನ್ನು ದಸ್ತಾವೇಜಿನ ಆಧಾರದಲ್ಲಿ ಬರೆಸಿರುತ್ತೇನೆ. ನಿಪಿ-11 ರಲ್ಲಿ ಸರ್ವೆ ನಂ. 6ಅ1ಪಿ5 ರಲ್ಲಿ 00-00-12 ಕ್ಷೇತ್ರ ಸರ್ಕಾರದ್ದು ಮತ್ತು ಮಾದೇವ ಬಿನ್ ಶನಿಯಾರ ನಾಯ್ಕ ರವರಿಗೆ 00-05-00 ಕ್ಷೇತ್ರ ಎಂದು ಇರುತ್ತದೆ ಎಂದರೆ ಸುಳ್ಳು. ಹಾಗಾದರೆ ನಿಪಿ-11 ದಾಖಲೆ ಸುಳ್ಳಾಗಿರುತ್ತದೆ ಎಂದರೆ, ಸಾಕ್ಷಿಯು ನಾನೇ ಹಾಜರುಪಡಿಸಿದ್ದು, ಅದು ಸರಿಯಾಗಿರುತ್ತದೆ.

4. ದಾವಾ ಆಸ್ತಿಯು ಮೂಲದಲ್ಲಿ ಸರ್ಕಾರಕ್ಕೆ ಸೇರಿದ ಆಸ್ತಿ ಎಂದರೆ ಹೌದು. ದಾವಾ ಆಸ್ತಿಯ ಮೂಲ ಸರ್ವೆ ನಂ. ನನಗೆ ಗೊತ್ತಿಲ್ಲ. ತದನಂತರ ದಾವಾ ಆಸ್ತಿಯ ಮೂಲ ಸರ್ವೆ ನಂ. 6ಅ3 ಆಗಿತ್ತು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಗಣಪತಿ ಕನ್ನಯ್ಯ ದೇವಾಡಿಗರವರಿಗೆ ಮಂಜೂರಿಯಾದ ಆಸ್ತಿ ಎಂದರೆ ಗೊತ್ತಿಲ್ಲ. ಸದ್ರಿಯವರಿಗೆ ಸರ್ವೆ ನಂ. 6ಅ ದಲ್ಲಿ ಪ್ಲೋಟ್ ನಂ. 5 ರಲ್ಲಿ 00-05-00 ಕ್ಷೇತ್ರ ಮಂಜೂರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದ್ರಿ ಗಣಪತಿ ಕನ್ನಯ್ಯ ದೇವಾಡಿಗರವರು ತನಗೆ ಮಂಜೂರಿಯಾದ ಕ್ಷೇತ್ರವನ್ನು ಮಾದೇವ ಶನಿಯಾರ ನಾಯ್ಕ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ತದನಂತರ ಮಾದೇವ ಶನಿಯಾರ ನಾಯ್ಕ ರವರು ತಾನು ಖರೀದಿ ಮಾಡಿದ ಕ್ಷೇತ್ರವನ್ನು ಗೌರಿ ಗಣಪತಿ ದೇವಾಡಿಗ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ಗೌರಿ ಗಣಪತಿ ದೇವಾಡಿಗ ರವರು ದಾವಾ ಆಸ್ತಿಯನ್ನು ಯಾರಿಂದ ಖರೀದಿ ಮಾಡಿದ್ದರು ಎಂಬ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ಕಂದಾಯ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ, ಸಾಕ್ಷಿಯು ಸದ್ರಿ ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯ ಒಟ್ಟೂ ಕ್ಷೇತ್ರ 00-05-12 ಎಂದರೆ ಹೌದು. ಅದರಲ್ಲಿ 00-05-00 ಕ್ಷೇತ್ರ ಮಾಲ್ಕಿ ಆಸ್ತಿಯಾಗಿದ್ದು, ಉಳಿದ ಕ್ಷೇತ್ರ 00-00-12 ಸರ್ಕಾರದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಗೌರಿ ಗಣಪತಿ ದೇವಾಡಿಗ ರವರು ಸೇರಿಕೊಂಡು ಸರ್ಕಾರದ 00-00-12 ಕ್ಷೇತ್ರವನ್ನು ಸೇರಿಸಿಕೊಂಡು ಕಾನೂನು ಬಾಹಿರವಾಗಿ ಇ-ಸ್ವತ್ತು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಹೇಳುವಂತೆ ದಾವಾ ಆಸ್ತಿಯಲ್ಲಿ ತೋರಿಸಿದ 00-05-12 ಕ್ಷೇತ್ರ ಬಿನ್ ಶೇತ್ಕಿಯಾಗಿ ಪರಿವರ್ತನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಿನ್ ಶೇತ್ಕಿ ಆದ ಬಗ್ಗೆ ಆದೇಶ ಮತ್ತು ಬಿನ್ ಶೇತ್ಕಿ ನಕ್ಷೆ ಇರುವುದಿಲ್ಲ. ನಾನು ಇವತ್ತಿನವರೆಗೆ ದಾವಾ ಆಸ್ತಿಯ ಬಿನ್ ಶೇತ್ಕಿ ಆದ ಬಗ್ಗೆ ಆದೇಶ ಮತ್ತು ಬಿನ್ ಶೇತ್ಕಿ ನಕ್ಷೆಯನ್ನು ನೋಡಿದ್ದೀರಾ ಎಂದರೆ, ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ದಾವಾ ಆಸ್ತಿಯ ಬಿನ್ ಶೇತ್ಕಿ ಆಗಿದೆ ಎಂದು ತೋರಿಸಲು ಇ-ಸ್ವತ್ತು ಇರುತ್ತದೆ. ನಿಪಿ-7 ನಕ್ಷೆಯಲ್ಲಿ ಸದ್ರಿ ನಕ್ಷೆಯ ಕ್ಷೇತ್ರ ಎಷ್ಟು ಎಂದು ನಮೂದು ಇರುವುದಿಲ್ಲ ಎಂದರೆ ಹೌದು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ  ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.